ಎದುರಿಗೆ ಕಾಯುತ್ತ ನಿಲ್ಲುವುದೇ ಅವರಿಗೆ ‘ಇವರು ಇಷ್ಟೆ’ ಎಂಬ ಭಾವ ಹುಟ್ಟಿಸಿರಲಿಕ್ಕೂ ಸಾಕು. ಆಗೆಲ್ಲ ಮಾಧ್ಯಮದವರೂ ತಮ್ಮ ಘನತೆಯನ್ನು ಕಾಪಾಡಿಕೊಂಡಿದ್ದರೆ ದರ್ಶನ್‌ಗೆ ಮಾಧ್ಯಮದ ಕುರಿತ ಅಭಿಪ್ರಾಯ ಬದಲಾಗುತ್ತಿತ್ತೇನೋ!

ಎಲ್ಲದಕ್ಕೂ ಒಂದು ಗಡಿ ಎಂಬುದು ಇರುತ್ತದಲ್ಲ. ಸಾರ್ವಜನಿಕ ವಿಷಯದಲ್ಲಿ ಇರುವುದು ಸಭ್ಯತೆಯ ಗಡಿ. ಮಾಧ್ಯಮಗಳ ವಿಷಯದಲ್ಲಿ ಆ ಗಡಿಯನ್ನು ದರ್ಶನ್ ಮತ್ತೆ ಮತ್ತೆ ದಾಟಿದ್ದಾರೆ. ದರ್ಶನ್ ಅವರ ವಿಷಯದಲ್ಲಿಯೂ ಹಲವು ಮಾಧ್ಯಮಗಳು ಆ ಗಡಿಯನ್ನು ದಾಟಿವೆಯೆಂಬುದನ್ನೂ ಒಪ್ಪಿಕೊಳ್ಳಬೇಕು.

ಅವೇನೇ ಇದ್ದರೂ ಈ ಬಿರುಕು ಈಗ ನಿರ್ಣಾಯಕ ಹಂತಕ್ಕೆ ಬಂದು ನಿಂತಿರುವುದಂತೂ ನಿಜ.

ಕಳೆದ ಎರಡು ವರ್ಷಗಳಿಂದ ದರ್ಶನ್ ಅವರನ್ನು ಹಲವು ಮುಖ್ಯ ಮಾಧ್ಯಮಗಳು ಅಘೋಷಿತವಾಗಿ ನಿಷೇಧಿಸಿವೆ. ಮಾಧ್ಯಮಗಳ ಕುರಿತಾಗಿ ಅಶ್ಲೀಲವಾಗಿ, ಒಬ್ಬ ಸಾರ್ವಜನಿಕ ವ್ಯಕ್ತಿಯ ಬಾಯಿಯಲ್ಲಿ ಬರಲೇಬಾರದ ಮಾತುಗಳಲ್ಲಿ ಜರಿದಿರುವುದು ಅದಕ್ಕೆ ಕಾರಣ. ಮಾಧ್ಯಮಗಳು ನನಗೆ ಬೇಕಿಲ್ಲ ಎನ್ನುವ ವ್ಯಕ್ತಿಯ ಎದುರು ನೀವೂ ನಮಗೆ ಬೇಕಿಲ್ಲ ಎಂದು ಹಲವು ಮಾಧ್ಯಮಗಳು ನಿಲುವು ತಳೆದಿರುವುದರ ಹಿಂದೆ ಪತ್ರಿಕೋದ್ಯಮದ ಗೌರವ ಕಾಪಾಡಿಕೊಳ್ಳುವ ಉದ್ದೇಶವೂ ಇದೆ. ನಿಷೇಧ ಎಲ್ಲದಕ್ಕೂ ಉತ್ತರವೇ ಎಂಬ ಪ್ರಶ್ನೆಯನ್ನು ಇಟ್ಟುಕೊಂಡೇ ಹೇಳುವುದಾದರೆ, ತುಸು ತಡವಾಗಿಯಾದರೂ ಮಾಧ್ಯಮಗಳು ತಮ್ಮ ಆತ್ಮಗೌರವಕ್ಕೆ ಸಂಬಂಧಿಸಿದ ವಿಷಯಕ್ಕೆ ಬಹುತೇಕ ಒಗ್ಗಟ್ಟಿನಿಂದ ಸ್ಪಂದಿಸುತ್ತಿರುವುದನ್ನು ಸಕಾರಾತ್ಮಕವಾಗಿಯೇ ನೋಡಬೇಕು.

ಆದರೆ ಇದರಿಂದ ದರ್ಶನ್ ಸ್ವಭಾವದಲ್ಲಾಗಲಿ, ಮಾಧ್ಯಮಗಳ ಕುರಿತ ಅವರ ನಿಲುವಿನಲ್ಲಾಗಲಿ ಯಾವ ವ್ಯತ್ಯಾಸವೂ ಆದಂತಿಲ್ಲ. ಅವರು ನಾಯಕನಾಗಿ ನಟಿಸುತ್ತಿರುವ ‘ಕ್ರಾಂತಿ’ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಆ ಸಿನಿಮಾದ ಕುರಿತ ಸುದ್ದಿ ಹಲವು ಮುಖ್ಯಮಾಧ್ಯಮಗಳಲ್ಲಿ ಬರುತ್ತಿಲ್ಲ. ಇದು ನಿರ್ಮಾಪಕರನ್ನು, ಚಿತ್ರತಂಡವನ್ನು ಎಷ್ಟು ಆತಂಕಕ್ಕೆ ದೂಡಿದೆಯೋ ಗೊತ್ತಿಲ್ಲ, ದರ್ಶನ್ ಅವರನ್ನಂತೂ ದಿಕ್ಕೆಡಿಸಿಲ್ಲ. ‘ನನ್ನ ಸಿನಿಮಾವನ್ನು ನನ್ನ ಅಭಿಮಾನಿಗಳೇ ಗೆಲ್ಲಿಸುತ್ತಾರೆ’ ಎಂದು ಅವರು ಹಮ್ಮಿನಿಂದಲೇ ಹೇಳಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಇದೇ ಭರದಲ್ಲಿ ಪುನೀತ್ ಕುರಿತೂ ತುಸು ಗೆರೆತಪ್ಪಿ ಮಾತಾಡಿ ಮತ್ತೊಂದು ವಿವಾದವನ್ನು ಹುಟ್ಟುಹಾಕಿದ್ದರು. ಅಭಿಮಾನಿಗಳ ಮೇಲಿನ ಅವರ ನಂಬಿಕೆಗೆ ಪೂರಕವಾಗಿ, ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಅವರ ಅಭಿಮಾನಿಗಳು ಹಲವು ರೂಪಗಳಲ್ಲಿ ‘ಕ್ರಾಂತಿ’ಯ ಪ್ರಚಾರಕ್ಕೆ ಇಳಿದಿದ್ದಾರೆ. ಸೋಷಿಯಲ್ ಮೀಡಿಯಾ, ಡಿಜಿಟಲ್ ವೇದಿಕೆಗಳಲ್ಲಿಯೂ ಡಿ ಬಾಸ್ ಅಭಿಮಾನಿಗಳು ಹಲವು ಬಗೆಯ ಪ್ರಚಾರಕ್ಕೆ ಮುಂದಾಗಿದ್ದಾರೆ. ಆದರೆ ಈ ಪ್ರಚಾರ ಅವರ ಸಿನಿಮಾವನ್ನು ಗೆಲ್ಲಿಸುವಷ್ಟು ಶಕ್ತಿಶಾಲಿಯಾಗಿದೆಯಾ? ಈ ಪ್ರಶ್ನೆಗೆ ಕಾಲವೇ ಉತ್ತರಿಸಬೇಕು. ಆದರೆ ಈ ಪ್ರಶ್ನೆಗೆ ಸಿಗುವ ಉತ್ತರಕ್ಕಾಗಿ ಹಲವರು ಮೌನವಾಗಿ ಕಾಯುತ್ತಿದ್ದಾರೆ ಎಂಬುದಂತೂ ಸುಳ್ಳಲ್ಲ.

ಮಾಧ್ಯಮ ನಿಷೇಧದ ನಡುವೆಯೂ ಅಭಿಮಾನಿಗಳ ಬಲದಿಂದ ಸಿನಿಮಾವನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾದರೆ ದರ್ಶನ್‌ಗೆ ನಿಜಕ್ಕೂ ಗಜಬಲ ಸಿಕ್ಕಂತಾಗುತ್ತದೆ. ಅವರ ಮುಂದಿನ ಸಿನಿಮಾಗಳಿಗೆ ಹಣ ಹೂಡಿರುವ ನಿರ್ಮಾಪಕರು ನೆಮ್ಮದಿಯ ನಿಟ್ಟುಸಿರನ್ನೂ ಬಿಡುವಂತಾಗುತ್ತದೆ. ಜೊತೆಗೆ ಕನ್ನಡದ ಇನ್ನಷ್ಟು ಸ್ಟಾರ್ ನಟರಿಗೆ ‘ಮಾಧ್ಯಮದ ಹಂಗು ಬೇಕಿಲ್ಲ’ ಎಂದೂ ಅನಿಸಬಹುದು. ಆದರೆ ಒಂದು ವೇಳೆ ಸಿನಿಮಾ ಬಾಕ್ಸ್ ಆಫೀಸಲ್ಲಿ ಸದ್ದು ಮಾಡದೇ ಹೋದರೆ, ದರ್ಶನ್ ಮುಂದಿನ ಸಿನಿಮಾ ನಿರ್ಮಾಪಕರಿಗೆ ಉಸಿರು ಗಂಟಲಲ್ಲಿ ಸಿಕ್ಕಿಕೊಳ್ಳುವುದರಲ್ಲಿ ಅನುಮಾನವಿಲ್ಲ. ಇನ್ನೊಂದು ದೃಷ್ಟಿಯಿಂದ ನೋಡಿದರೆ, ಈ ವಿದ್ಯಮಾನ ಮಾಧ್ಯಮಗಳ ಆತ್ಮವಿಮರ್ಶೆಗೂ ಪ್ರೇರಣೆಯನ್ನು ಒದಗಿಸಿದರೆ ಅದೂ ಒಳ್ಳೆಯದೇ.

ಅಭಿಮಾನದ ಭಕ್ತಿ ಮತ್ತು ಮಾಧ್ಯಮ ಶಕ್ತಿಗಳ ನಡುವೆ ನಡೆಯುತ್ತಿರುವ ಈ ಶೀತಲಸಮರ, ಹಲವು ಪ್ರಶ್ನೆಗಳಿಗೆ ಉತ್ತರವನ್ನೂ, ಮತ್ತು ಹಲವು ಪ್ರಶ್ನೆಗಳನ್ನೂ ಹುಟ್ಟುಹಾಕುವುದಂತೂ ಸತ್ಯ. ಹಾಗಾಗಿ ‘ಕ್ರಾಂತಿ’ ಸಿನಿಮಾ ತನ್ನ ಶೀರ್ಷಿಕೆಯ ಅರ್ಥವನ್ನು ಚಿತ್ರಮಂದಿರದ ಹೊರಗೂ ಧ್ವನಿಸುತ್ತದೆಯೇ ಎಂಬುದನ್ನು ಹಲವು ಕಣ್ಣುಗಳು ಕುತೂಹಲದಿಂದ ನೋಡುತ್ತಿವೆ. ■



# ಖಳ ಕಿಟ್ಟಿ!

ಅಪರೂಪಕ್ಕೊಮ್ಮೆ ತೆರೆಯ ಮೇಲೆ ಕಾಣಿಸಿಕೊಳ್ಳುವ ಶ್ರೀನಗರ ಕಿಟ್ಟಿ, ಭಿನ್ನ ಪಾತ್ರಗಳ ಮೂಲಕ ಗಮನಸೆಳೆಯುವ ನಟ. ಅವರು ನಾಯಕನಾಗಿ ನಟಿಸಿರುವ ‘ಗೌಳಿ’ ಸಿನಿಮಾ ನಿರ್ಮಾಣಹಂತದಲ್ಲಿದೆ. ಈಗ ಮತ್ತೊಂದು ಸಿನಿಮಾದಲ್ಲಿ ವಿಲನ್ ಆಗಿ ಮಿಂಚಲು ಕಿಟ್ಟಿ ಸಜ್ಜಾಗಿದ್ದಾರೆ.

ವಿನೋದ್ ಪ್ರಭಾಕರ್ ಮತ್ತು ಸೋನಲ್ ಮೊಂತೆರೊ ನಟನೆಯ ‘ಮಾದೇವ’ ಸಿನಿಮಾ ಚಿತ್ರೀಕರಣ ನಡೆಯುತ್ತಿದೆ. ಈಗ ಆ ಚಿತ್ರತಂಡಕ್ಕೆ ಖಳನಟನ ಜಾಗದಲ್ಲಿ ಶ್ರೀನಗರ ಕಿಟ್ಟಿ ಎಂಟ್ರಿ ಪಡೆದುಕೊಂಡಿದ್ದಾರೆ. ಅವರ ಖಡಕ್ ಲುಕ್‌ನ ಪೋಸ್ಟರನ್ನೂ ಚಿತ್ರತಂಡ ಬಿಡುಗಡೆ ಮಾಡಿದೆ.

80ರ ದಶಕದ ಕಥೆಯನ್ನು ಒಳಗೊಂಡಿರುವ ಈ ಸಿನಿಮಾದಲ್ಲಿ ಸಮುದ್ರ ಎಂಬ ಪವರ್‌ಫುಲ್ ಗ್ಯಾಂಗ್‌ಸ್ಟರ್ ಪಾತ್ರದಲ್ಲಿ ಕಿಟ್ಟಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಶೇ. 50ರಷ್ಟು ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಮುಂದಿನ ಶೆಡ್ಯೂಲ್ ಅನ್ನು ಶಿವಮೊಗ್ಗದಲ್ಲಿ ನಡೆಸಲು ಸಿದ್ಧತೆ ನಡೆಸಿದೆ.

ನವೀನ್ ರೆಡ್ಡಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದಲ್ಲಿ ಶೃತಿ, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ನಟಿಸುತ್ತಿದ್ದಾರೆ. ಆರ್. ಕೇಶವ ದೇವಸಂದ್ರ ಹಣ ಹೂಡಿದ್ದಾರೆ. ಬಾಲಕೃಷ್ಣ ಥೋಟ ಛಾಯಾಗ್ರಹಣ, ಪ್ರದ್ಯೋತ್ತನ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ■

